ದಿನಾಂಕಃ 09/04/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ

3. ಈ ಅರ್ಜಿಯನ್ನು ನಾನು ಒಬ್ಬನೇ 1 ಮತ್ತು 2 ನೇ ಎದುರುದಾರರ ವಿರುದ್ಧ ಹಾಕಿರುತ್ತೇನೆ. ಅರ್ಜಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರು ಮಾಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಹುಬ್ಬಳ್ಳಿಯಲ್ಲಿ ನಾನು ಆರ್ ಜಿ ಮೇಹರವಾಡೆ ಅವರಿಗೆ ಸೇರಿದ ಮನೆಯಲ್ಲಿ ಬಾಡಿಗೆಗೆ 1 ನೇ ಮಹಡಿಯಲ್ಲಿ ವಾಸವಿದ್ದೇನೆ. ಕೆಳಗಿನ ಮಹಡಿಯಲ್ಲಿ ಕಾಟ್ , ಕಿಟಕಿ ಬಾಗಿಲು ತಯಾರು ಮಾಡುವ ಇಂಜಿನಿಯರಿಂಗ್ ವರ್ಕ್ಸ್ ಇದೆ. ಆರ್ ಜಿ ಮೆಹರೆವಾಡೆ ಅವರಿಗೆ ಸೇರಿದ ಮನೆ ಎಂದು ತೋರಿಸಲು ಸರಕಾರಿ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಬಾಡಿಗೆ ಪತ್ರವನ್ನು ಹಾಜರು ಪಡಿಸಿದ್ದೇನೆ. ಬಾಡಿಗೆ ಪತ್ರವನ್ನು ನನ್ನ, ಮಾಲೀಕರ ಹಾಗೂ ಅವರ ಮಗನ ಸಹಿ ಇದೆ. ಮಾಲೀಕರ ಹೆಸರು ರವೀಂದ್ರ ಮೇಹರವಾಡೆ. ಮಗನ ಹೆಸರು ಪರಶುರಾಮ. ಬಾಡಿಗೆ ಪತ್ರ ತಯಾರು ಮಾಡುವಾಗ ಹಿರಿಯರು ಇದ್ದರಾ ಎಂದರೆ ಇರಲಿಲ್ಲ. ಸ್ಟ್ಯಾಂಪ್ ನ್ನು ನಾನೇ ಖರೀದಿ ಮಾಡಿರುತ್ತೇನೆ. ರವೀಂದ್ರ ಮೇಹರವಾಡೆ ಅವರ ಹೆಸರಿನಲ್ಲಿ ಬಾಡಿಗೆ ಪತ್ರ ಬರೆದು ಕೊಟ್ಟಿರುತ್ತೇನೆ. ಬೆರಳಚ್ಚನ್ನು ಹಳೇ ಹುಬ್ಬಳ್ಳಿಯ ಖಾಸಗಿ ಬೆರಳಚ್ಚು ಕೇಂದ್ರದಲ್ಲಿ ಮಾಡಿಸಿರುತ್ತೇನೆ. ಅವರ ಹೆಸರು ಗೊತ್ತಿಲ್ಲ. ಬಾಡಿಗೆ ಪತ್ರ ಬರೆಯುವ ಒಂದು ವಾರದ ಮೊದಲು ಆ ಮನೆಯಲ್ಲಿ ವಾಸವಿದ್ದೆ. ಬಾಡಿಗೆದಾರ ಎಂದು ವಾಸವಿದ್ದೆ. ನಿಪಿ. 2 ಸದರಿ ಬಾಡಿಗೆ ಪತ್ರ. ನಿಪಿ. 2 ರ 2 ನೇ ಸಾಕ್ಷಿದಾರ ಸ್ಥಳ ಖಾಲಿ ಇದೆ. ಅದಕ್ಕೂ ಮೊದಲು ನಾನು ಸಿದ್ಧಾರೂಡ ಮಠದ ಹತ್ತಿರ ಬಡಿಗೇರ ಎಂಬುವವರ ಮನೆಯಲ್ಲಿ 8 ತಿಂಗಳು ಬಾಡಿಗೆಗೆ ವಾಸವಿದ್ದೆ. 20 ವರ್ಷಗಳಿಂದ ನಾನು ಹುಬ್ಬಳ್ಳಿಯಲ್ಲಿ ವಾಸವಿದ್ದೇನೆ. ಬಾಡಿಗೆ ಕೊಟ್ಟವರ ಸಾಕ್ಷಿ ಮಾಡಿಸುತ್ತೀರಾ ಎಂದರೆ ಮಾಡಿಸುತ್ತೇನೆ.

4. ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ನನಗೆ ಇಂಗ್ಲೀಷ ಓದಲು ಮತ್ತು ಬರೆಯಲು ಬರುವುದಿಲ್ಲ. ವಕೀಲರು ಓದಿ ಹೇಳಿದ ನಂತರ ಸರಿ ಇದೆ ಎಂದು ಒಪ್ಪಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಇರುವ ಬಾಡಿಗೆ ಮನೆ ಸಿದ್ಧಾರೂಡ ನಗರದಲ್ಲಿ ಇರುವುದಿಲ್ಲ. ಹೆಗ್ಗೇರಿ ಕಾಲೋನಿಯಲ್ಲಿದೆ ಎಂದು ಬರೆಸಿದ್ದೇನೆ. ನಿಪಿ. 2 ರಲ್ಲಿರುವ ವಿಳಾಸ ನನ್ನ ಬಾಡಿಗೆ ಮನೆ ವಿಳಾಸ. ನಿಪಿ. 2 ರಲ್ಲಿ ನನ್ನ ವಿಳಾಸ ಹೆಗ್ಗೇರಿ ಕಾಲೋನಿಯಂದು ನಮೂದು ಇಲ್ಲ ಎಂದರೆ ಸರಿ. ಸಿದ್ಧಾರೂಡ ನಗರ ಎಂದು ಬರೆಯಲಾಗಿದೆ

ಎಂದರೆ ಸರಿ. ಈ ಕೇಸಿಗಾಗಿ ನಿಪಿ. 2 ನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಎಲ್ಲ ದಾಖಲೆಗಳಲ್ಲಿ ಸಿದ್ಧಾರೂಡ ನಗರ ಎಂದು ನಮೂದಿದೆ ಎಂದರೆ ಸರಿ. ನಾನು ಸಿದ್ಧಾರೂಡ ನಗರದಲ್ಲಿಲ್ಲ ಹೆಗ್ಗೇರಿ ಕಾಲೋನಿಯಲ್ಲಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಅಸಲು ದಾವಾ ನಂಬರ 39/2020 ರ ನೋಟೀಸ ಜಾರಿಯಾಗಿತ್ತಾ ಎಂದರೆ ಇಲ್ಲ. ಸದರಿ ದಾವೆಯಲ್ಲಿ ಹೇಗೆ ಹಾಜರಾಗಿದ್ದೀರಿ ಎಂದರೆ ಸಾಕ್ಷಿ ಆರ್ ಜೆ ಮೇಹರವಾಡೆ ಅವರ ವಿಳಾಸಕ್ಕೆ ಜಾರಿಯಾಗಿದ್ದರಿಂದ ಹಾಜರಾಗಿದ್ದೇನು. ಎಫ್ ಡಿ ಪಿ ನಂಬರ 3/2019 ರ ನೋಟೀಸ ಮೂಲ ದಾವೆಯಲ್ಲಿದ್ದ ವಿಳಾಸಕ್ಕೆ ಕಳುಹಿಸಲಾಗಿತ್ತು ಎಂದರೆ ನನಗೆ ಬಂದಿಲ್ಲ. ಸದರಿ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿತ್ತು ಎಂದರೆ ನನಗೆ ಮುಟ್ಟಿಲ್ಲ. ಅಂಚೆ ಇಲಾಖೆಯವರು ತಪ್ಪು ಶರಾ ಬರೆದಿದ್ದಾರೆ ಎಂದು ಅವರ ವಿರುದ್ಧ ಕ್ರಮ ಕೈಗೊಂಡಿದ್ದೀರಾ ಎಂದರೆ ನನಗೆ ಗೊತ್ತಾಗಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಪ್ಪು ವಿಳಾಸಕ್ಕೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದು ಬರೆಸಿದ್ದೀರಾ ಎಂದರೆ ಗೊತ್ತಾದ ಮೇಲೆ ಬರೆಸಿದ್ದೇನೆ. ಆ ನಂತರ ಅಂಚೆ ಇಲಾಖೆಯವರ ಮೇಲೆ ಕ್ರಮ ಕೈಗೊಂಡಿದ್ದೀರಾ ಎಂದರೆ ಇಲ್ಲ.

6. ನನ್ನ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ನಾಲ್ಕು ಮಕ್ಕಳು ವಾಸವಿದ್ದೇವೆ. ನನ್ನ ಹೆಂಡತಿ ಹಾಗೂ ಮಕ್ಕಳು ನನ್ನ ಆದಾಯದ ಮೇಲೆ ಅವಲಂಬಿತರಾಗಿದ್ದಾರೆ. ನನ್ನ ಮಕ್ಕಳು ಅಸಲು ದಾವಾ ನಂಬರ 107/2023 ರಂತೆ ಶಿಗ್ಗಾಂವ್ ದಿವಾಣಿ ನ್ಯಾಯಾಲಯದಲ್ಲಿ ದಾವಾ ಹಾಕಿದ್ದಾರಾ ಎಂದರೆ ಗೊತ್ತಿಲ್ಲ. ಇಂದಿನವರೆಗೂ ನನಗೆ ಮನೆಯಲ್ಲಿ ದಾವಾದ ವಿಚಾರ ತಿಳಿಸಿಲ್ಲ. ಸದರಿ ದಾವಾದ ನೋಟೀಸ ಜಾರಿಯಾಗಿದೆಯಾ ಎಂದರೆ ಇಲ್ಲ. ಬೇಂಡಿಗೇರಿ ವಕೀಲರು ನನಗೆ ಗೊತ್ತಿಲ್ಲ. ಸದರಿ ದಾವಾದಲ್ಲಿ ನಾನು ಹಾಜರಾಗಿಲ್ಲ ಹಾಗೂ ವಕೀಲರ ಮೂಲಕ ವಕಾಲತ್ತು ಹಾಕಿಸಿಲ್ಲ. ಖರೀದಿ ಪತ್ರ ಇಂದಿನವರೆಗೂ ಯಾರಿಗಾದರೂ ಬರೆದುಕೊಟ್ಟಿದ್ದೀರಾ ಎಂದರೆ ಇಲ್ಲ. ಖರೀದಿ ಪತ್ರಗಳಲ್ಲಿ ತಡಸ ಶಿಗ್ಗಾಂವ್ ತಾಲೂಕ ಎಂದು ವಿಳಾಸ ಬರೆಸಿದ್ದೀರಾ ಎಂದರೆ ನೆನಪಿಲ್ಲ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಆರ್ ಎಫ್ ಎ ನಂಬರ 100072/2019 ರಂತೆ ಸಲ್ಲಿಸಿದ್ದೀರಾ ಎಂದರೆ ನಿಜ. ಸದರಿ ಪ್ರಕರಣದಲ್ಲಿ ನಿಪಿ. 2 ವಿಳಾಸ ಕಾಣಿಸಿದ್ದೀರಾ ಎಂದರೆ ಹೌದು. ಸದರಿ ಆರ್ ಎಫ್ ಎ ದಲ್ಲಿ ನಾನು ನನ್ನ ವಿಳಾಸ ತಡಸ ತಾಲೂಕ ಶಿಗ್ಗಾಂವ್ ಎಂದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಎಫ್ ಡಿ ಪಿ ಅರ್ಜಿಯಲ್ಲಿ ತೋರಿಸಿದ ವಿಳಾಸದಲ್ಲಿ ನಾನು ಖಾಯಂ ವಾಸವಿದ್ದೇನೆ ಎಂದರೆ ಅರ್ಜಿ ನೋಡದೇ ಹೇಳಲಾಗುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ